ಪುಸ್ತಕ ಪರಿಚಯ

# ‘ಶ್ರೀ ಲಲಿತಾಮೃತಮ್’

ಶ್ರೀದೇವಿಯ ಉಪಾಸಕರಿಗೆ ಅತ್ಯಂತ ಪೂಜ್ಯವೂ ಉಪಯುಕ್ತವೂ ಪವಿತ್ರವೂ ಆದ ಸ್ತೋತ್ರಮಾಲೆಯೇ ಶ್ರೀ ಲಲಿತಾಸಹಸ್ರನಾಮ ಸ್ತೋತ್ರ. ಈ ಕೃತಿಯಲ್ಲಿರುವ ಜಗನ್ಮಾತೆಯ ನಾಮಗಳನ್ನು ವಿಸ್ತೃತವಾಗಿ ವಿವರಿಸಿ ವ್ಯಾಖ್ಯಾನ ಮಾಡಿರುವ ಹೊಸ ಕೃತಿಯೇ ‘**ಶ್ರೀ ಲಲಿತಾಮೃತಮ್.**’ ಲೇಖಕಿ ಡಾ. ವಿ.ಶ್ರೀಮತಿಯವರು ತಮ್ಮ ಉಪೋದ್ಘಾತದಲ್ಲಿ ನುಡಿದಿರುವಂತೆ, ಮೂಲತಃ ಪ್ರವಚನದಲ್ಲಿ ನೀಡಲಾದ ಈ ಕೃತಿಯ ವ್ಯಾಖ್ಯಾನವನ್ನೇ ಪುಸ್ತಕ ರೂಪಕ್ಕೆ ತರಲು ಪ್ರಯತ್ನಿಸಲಾಗಿದೆ.

ಈಗಾಗಲೇ ಕನ್ನಡದಲ್ಲಿ ಶ್ರೀ ಲಲಿತಾಸಹಸ್ರನಾಮದ ವಿವರಣೆಯ ಹಲವು ಗ್ರಂಥಗಳು ಹೊರಬಂದಿವೆ. ಆದರೂ ಹೊಸ ಅರ್ಥಗಳ, ವ್ಯಾಖ್ಯಾನಗಳ ಅಗತ್ಯ ಯಾವಾಗಲೂ ಇದ್ದೇ ಇದೆ. ಕಾರಣ, ಜನಸಾಮಾನ್ಯರಿಗೆ ಒಂದು ಮಹಾನ್ ಕೃತಿ ಆಪ್ತವಾಗಲು ಎಷ್ಟು ಬಗೆಯ ವಿವರಣೆಗಳಿದ್ದರೂ ಕಡಿಮೆಯೇ. ಈ ಹೊಸ ಕೃತಿಯ ವಿಶೇಷತೆಯನ್ನು ಕುರಿತು ಮುನ್ನುಡಿಯಲ್ಲಿ ಡಾ. ಪ್ರಸನ್ನಾಕ್ಷಿಯವರು ಹೀಗೆ ಹೇಳಿದ್ದಾರೆ: ‘‘ತಮ್ಮ ಜ್ಞಾನವನ್ನು , ಅನುಭವವನ್ನು ವಿದ್ವಾಂಸರಿಗಷ್ಟೇ ಅಲ್ಲದೆ ಸಾಧಾರಣ ಜನತೆಗೂ ತಿಳಿಯುವಂತೆ ತಿಳಿಸಿಕೊಡುವುದು ಒಂದು ದೈವೀ ಶಕ್ತಿಯೇ, ತಾಯಿಯ ವರವೇ ಆಗಿದೆ. ಇದು ಮಹಾನ್ ಸಾಹಸಕಾರ್ಯ. ಅಗತ್ಯವಿದ್ದೆಡೆಗಳಲ್ಲಿ ತಮ್ಮ ವಿವರಣೆಗೆ ಪೂರಕವಾಗಿ ಭಾರತೀಯ ದರ್ಶನ ಶಾಸ್ತ್ರಗಳ, ಪುರಾಣ ಮೊದಲಾದ ಇತರ ಶಾಸ್ತ್ರ ಗ್ರಂಥಗಳ, ಭಗವದ್ಗೀತೆಯ ವಾಕ್ಯಗಳನ್ನು, ಶ್ಲೋಕಗಳನ್ನು ಆಧಾರವಾಗಿ ಉದಾಹರಿಸಿದ್ದಾರೆ. ಕೆಲವೆಡೆಗಳಲ್ಲಿ ನಾಸ್ತಿಕ-ಆಸ್ತಿಕ ದರ್ಶನಗಳಲ್ಲಿ ಪ್ರತಿಪಾದಿತವಾಗಿರುವ ಎಲ್ಲಾ ತತ್ತ್ವಗಳನ್ನು ಸಂಗ್ರಹಿಸಿ ಹೇಳಿದ್ದಾರೆ. ಇಂತಹ ಸಾಹಸ ಮಾಡಲು ಗಂಡೆದೆ ಬೇಕು.’’




**ಕೃತಿ:** ಶ್ರೀ ಲಲಿತಾಮೃತಮ್
**ಲೇಖಕರು :** ಡಾ. ವಿ. ಶ್ರೀಮತಿ
**ಪ್ರಕಾಶನ :** ಶ್ರೀರಾಮಕೃಷ್ಣ ಆಶ್ರಮ
ಯಾದವಗಿರಿ, ಮೈಸೂರು- 570020
ಮೊ.: 0821-2417444, 2412424
**ಬೆಲೆ:** 320/- **ಪುಟ:** 627

ಪೀಠಿಕೆಯಲ್ಲಿ ಶ್ರೀಲಲಿತಾ ಸಹಸ್ರನಾಮದ ವಿಶೇಷತೆ, ಶ್ರೀಲಲಿತಾದೇವಿಯ ಅವತಾರದ ಹಿನ್ನೆಲೆ, ಸಹಸ್ರನಾಮದ ಪೂರ್ವಪೀಠಿಕೆ, ಹಯಗ್ರೀವ ಅವತಾರ, ಫಲಶ್ರುತಿ ಮುಂತಾದ ವಿಷಯಗಳನ್ನು ಕುರಿತ ವಿವರಣೆಗಳಿವೆ. ಅದೇ ರೀತಿ ಅನುಬಂಧದಲ್ಲಿ ಆಧಾರ ಗ್ರಂಥಗಳ ಪಟ್ಟಿ, ಲಲಿತಾದೇವಿಯ ಆಸನ, ಸ್ಥಳಗಳ ನಾಮಗಳ ವಿವರ, ಅವಳ ಆಭರಣಗಳ ನಾಮಗಳು, ಅವಳಿಗೆ ಪ್ರಿಯವಾದ ಹೂವುಗಳ ನಾಮಗಳು, ಬೀಜಾಕ್ಷರ, ಚಕ್ರ ಇತ್ಯಾದಿ ವಿವರಗಳು, ಹಾಗೂ ಇಡೀ ಲಲಿತಾಸಹಸ್ರನಾಮದ ಪೂರ್ಣಪಾಠ ಇವಿಷ್ಟನ್ನೂ ನೀಡಲಾಗಿದೆ. ಓದುಗರಿಗೆ ಇವು ಸಮಗ್ರ ಮಾಹಿತಿಯನ್ನಲ್ಲದೆ ಹೆಚ್ಚಿನ ವಿವರಗಳನ್ನೂ ನೀಡುತ್ತವೆ.

ಲಲಿತಾ ಸಹಸ್ರನಾಮಗಳ ವಿವರಣೆ ಹೇಗಿದೆ? ಅದಕ್ಕೆ ಒಂದು ಉದಾಹರಣೆ: (೭೦೪ನೇ ನಾಮ) ‘‘**ಸರಸ್ವತೀ** - ಸರಸ್ವತಿರೂಪಳು. ಈಗ ಎರಡು ನಾಮಗಳಲ್ಲಿ ಸರಸ್ವತೀ ದೇವಿಯ ವರ್ಣನೆ ಕಂಡುಬರುತ್ತದೆ. ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳ ಜ್ಞಾನಕ್ಕೆ ಅಧಿದೇವತೆಯು ಈಕೆ. ಓಂಕಾರಸ್ವರೂಪವಾದ ಪರಬ್ರಹ್ಮಸ್ವರೂಪಿಣಿಯು. ಸೃಷ್ಟಿಕಾರ್ಯಕ್ಕಾಗಿ ಓಂಕಾರದ ಕಳಾ ಮತ್ತು ನಾದರೂಪವಾಗಿ ತನ್ನಿಂದ ತಾನೇ ಆವಿರ್ಭವಿಸಿ ಹರಿದು ಬಂದಿರುವ ಕಾರಣ ಸರಸ್ವತೀ ಎನ್ನಲಾಗಿದೆ. ತನ್ನ ಭಕ್ತರಿಗೆ ಉತ್ತಮ ಜ್ಞಾನವನ್ನು ದೊರಕಿಸಿಕೊಡುವವಳು ಸರಸ್ವತೀ ದೇವಿ. ವಿದ್ಯೆ , ನಾದ, ಜ್ಞಾನಗಳಿಗೆ ಅಧಿದೇವತೆಯು ಈಕೆ. ಎಲ್ಲರ ನಾಲಿಗೆಯಲ್ಲಿ ನೆಲೆಸಿರುವಂತಹ ವಾಗ್ದೇವತೆ. ‘ಸರಸ್’ ಎಂದರೆ ಬ್ರಹ್ಮರಂಧ್ರದಿಂದ ಪ್ರವಹಿಸುವ ಅಮೃತ. ‘ವತಿ’ ಎಂದರೆ ಒಡತಿ. ಅಧಿದೇವತೆ ಎಂದೂ ಅರ್ಥೈಸಲಾಗುತ್ತದೆ. ನಾದಮಯಿ, ವಾಙ್ಮಯಿ, ಚಿನ್ಮಯಿಯಾಗಿರುವವಳು ಶ್ರೀ ಸರಸ್ವತೀ ದೇವಿ.’’ ಪದದ ಅರ್ಥ, ತಾತ್ತ್ವಿಕ ಹಿನ್ನೆಲೆ, ನಾಮದ ವಿಶೇಷತೆ, ಆಧ್ಯಾತ್ಮಿಕ ಮಹತ್ವ— ಇವಿಷ್ಟು ವಿವರಗಳು ಇಲ್ಲಿ ಬಂದಿವೆ.

ಇನ್ನು ಕೆಲವು ನಾಮಗಳಿಗೆ ಶಾಸ್ತ್ರಗಳಿಂದ ಹಲವು ಶ್ಲೋಕಗಳ ಆಧಾರದಲ್ಲಿ ಹೆಚ್ಚಿನ ವಿವರಣೆ ನೀಡಲಾಗಿದೆ. ಆದರೆ ವಿವರಣೆಗಳು ಅತ್ಯಂತ ಸರಳವೂ ಸುಲಭವೂ ಹೃದ್ಯವೂ ಆದ ಭಾಷೆಯಲ್ಲಿವೆ. ಸಾಮಾನ್ಯ ಓದುಗರಿಗೆ ಇವು ಅತ್ಯಂತ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ. ಸಾಂದರ್ಭಿಕವಾಗಿ ಕೆಲವು ಕಥೆಗಳನ್ನೂ ಅಲ್ಲಲ್ಲಿ ನಿರೂಪಿಸಿದ್ದಾರೆ ಲೇಖಕಿ. ಒಟ್ಟಿನಲ್ಲಿ ಲಲಿತಾಸಹಸ್ರನಾಮ ಪಾರಾಯಣ ಮಾಡುವವರೆಲ್ಲ ಈ ಗ್ರಂಥವನ್ನು ಒಂದು ಉತ್ತಮ ಕೈಪಿಡಿಯಾಗಿ ಇಟ್ಟುಕೊಳ್ಳಬಹುದಾಗಿದೆ. ✸